MR. SPEAKER.—The question is :

"That leave be granted to introduce the Karnataka Appropriation (No. 2) Bill, 1989."

The motion was adopted and leave was granted.

SRI B.BASAVALINGAPPA.—Sir, I beg to Introduce the Karnataka Appropriation (No. 2) Bill. 1989.

MR. SPEAKER.—The Bill is introduced **

೧೯೮೯ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೯ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೯ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—"ಖಂಡ ೨ ಮತ್ತು ೩ನೇ ಖಂಡಗಳು ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಪ್ರಸ್ತಾವನ್ನು ಅಂಗೀಕರಿಸಲಾಯಿತ್ತು)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವಿ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು).—೧೯೮೯ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. "೧೯೮೯ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ವಂಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯ ಚರ್ಚೆಯಲ್ಲಿ ಹೆಚ್ಚು ಸದಸ್ಯರು ಭಾಗವಹಿಸಬೇಕು ಎಂದು ಹೇಳಿ ಇಷ್ಟಪಟ್ಟಿದ್ದಾರೆ. ಆದುದರಿಂದ ಈ ಸದನ ಒಪ್ಪಿದರೆ ನಾವು ತಡವಾಗಿ ಇವತ್ತು ಪೆಬ್ರವರಿ ೯ಕ್ಕೆ ಕಲಾಪವನ್ನು ಇಟ್ಟುಕೊಳ್ಳಬಹುದು. ಇಲ್ಲ ಎಂದು ಹೇಳಿದರೆ ನಾಳೆ ಬಳಿಗ್ಗೆ ಎಂಟೂವರೆ ಸದನ ಸೇರಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾಳೆಗೆ ಚರ್ಚೆ ಮುಗಿಯಬೇಕು, ಆಕಾರ್ಡಿಂಗ್ ಟು ದಿ ಹೆಡ್ಡೂಲ್, ಹೀಗಿರುವಾಗ ತಾವು ಹೇಳುತ್ತೀರಿ, ಅನೇಕ ಜನ ಸದಸ್ಯರುಗಳು ಮಾತನಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆಂದು, ಆದುದರಿಂದ ಇಪತ್ತು ಇನ್ನೂ ಒಂದು ಗಂಟೆ ಹೆಚ್ಚು ಕಾಲ ಕುಳಿತುಕೊಂಡರೆ ಇಬ್ಬರಿಗಾದರೂ ಮಾತನಾಡಲಿಕ್ಕೆ ಅವಕಾಶ ಇರುತ್ತದೆ.

ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ (ಹಿರೇಕೆರೂರು).—ಮಾನ್ಯ ಸಭಾಧ್ಯಕ್ಷರೇ, ಸದನವನ್ನು ಇಂದು ಮುಂದುವರೆಸಬೇಕೋ ಅಥವಾ ನಾಳೆಗೆ ಮುಂದೂಡಬೇಕೋ ಎನ್ನುವ ಜಿಜ್ಞಾಸೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಈ ಸದನದಲ್ಲಿ ನನ್ನ ಕೆಲವಾರು ವಿಚಾರಗಳನ್ನು ವ್ಯಕ್ತಪಡಿಸಲಿಕ್ಕೆ ಇಚ್ಛಿಸುತ್ತೇನೆ. ಕೇವಲ ರಾಜಕೀಯಕ್ಕಾಗಿಯೇ ಮಾತನಾಡುವುದು ಸೂಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಮಾತನಾಡುವಾಗ ರಚನಾತ್ಮಕವಾಗಿ, ಜನತೆಯ ಕಲ್ಯಾಣದ ಪರವಾಗಿ ಮಾತನಾಡಬೇಕು. ನಾನು ಪಕ್ಷಭೇದವನ್ನು ಬಿಟ್ಟು ಮುಖ್ಯವಾದ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಮಾತನ್ನು ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಅನೇ ಪುಟದಲ್ಲಿ ಹೇಳಿದಂತಹ ಮಾತನ್ನೂ ಸ್ವಲ್ಪ ಅವಲೋಕಿಸಬೇಕಾಗಿದೆ. ಹೆಚ್ಚಿನ ಜನರು ವ್ಯವಸಾಯವನ್ನೇ ಅವಲಂಬಿಸಿರುತ್ತಾರೆ, ಆದುದರಿಂದ ಕೃಷಿ ವಲಯಕ್ಕೆ ವಿಶೇಷ ಆದ್ಯತೆ ನೀಡುತ್ತೇವೆ ಎಂದು ಹೇಳಿದ್ದಾರೆ. ೧೦೦ ಕ್ಕೆ ೭೦ ರಷ್ಟು ಜನ ಕೃಷಿಕರು, ವ್ಯವಸಾಯಗಾರರು. ಜಮೀನಿನಲ್ಲಿ ಕೆಲಸ ಮಾಡತಕ್ಕ ಕೂಲಿಗಾರರು ಎಂಬ ಶಬ್ದ ಇದ್ದಾಗ್ಯೂ ರಾಜ್ಯಪಾಲರ ಭಾಷಣದಲ್ಲಿ ಮುಂದಿನ ಪೇಜಿನಲ್ಲಿ ಈ ರೀತಿ ಹೇಳಲಾಗಿದೆ. ಕೃಷಿ ವಲಯಕ್ಕೆ ನನ್ನ ಸರ್ಕಾರವು ವಿಶೇಷ ಆದ್ಯತೆ ನೀಡುತ್ತದೆ. ಅವು ಅಂದರೆ ತಾಂತ್ರಿಕ ಮಾರ್ಗದರ್ಶನ, ಬಿತ್ತನೆ ಬೀಜಗಳು, ಗೊಬ್ಬರ ಮತ್ತು ಕೀಟನಾಶಗಳನ್ನು ಒದಗಿಸುವ ಮೂಲಕ ರೈತರಿಗೆ ಬೇಕಾದ ಎಲ್ಲಾ ಪರಿಕರಗಳನ್ನು ನೀಡಲಾಗುವುದು ಎಂದು ಹೇಳಿದ್ದಾರೆ. ನಿನ್ನೆಯವರೆಗೆ ನಮ್ಮ ಮಾನ್ಯ ಸ್ನೇಹಿತರುಗಳು ರೈತರ ಪಾಲ ಮನ್ನಾ ಬಗ್ಗೆ ಧರಣಿ ಮಾಡಿದರು. ತಾವು ಉತ್ತರ ಕೊಡುತ್ತಾರೆಂದು ಹೇಳಿದಾಗ್ಯೂ ಸಹ ಆಕ್ಷೇಪವನು ಎತ್ತಿದರು. ಈ ದೇಶದಲ್ಲಿ ಸ್ವಾತಂತ್ರ್ಯ ನಂತರ ಅನೇಕ ಪಂಚವಾರ್ಷಿಕ ಯೋಜನೆಗಳು ಆಗಿವೆ. ದೇಶಕ್ಕೆ ಅನ್ನದಾತನಾದ ರೈತನಿಗೆ ಯಾವ ರೀತಿ ಅನುಕೂಲ ಒದಗಿಸಬೇಕು, ಬೆಳೆಯನ್ನು ಹೇಗೆ ಬೆಳೆಯಬೇಕು ಹಸಿರು ಕ್ರಾಂತಿಯನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ವ್ಯವಸ್ಥೆಯನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ರೂಪಿಸಲಾಗಿವೆ. ಹೆಚ್ಚಿನ ಬೆಳೆಗಳನ್ನು ಬೆಳೆಯುವುದಕ್ಕೆ ಸಾಲಸೂಲಗಳನ್ನು ಕೊಟ್ಟು ರೈತರು ಹೆಚ್ಚು ಬೆಳೆ ಬೆಳೆಯುವುದಕ್ಕೆ ಕಡಿಮೆ ಬೆಳೆಯುತ್ತಿರುವಲ್ಲಿ ಹೆಚ್ಚಿಗೆ ಬೆಳೆಯುವುದಕ್ಕೆ ಅಂದರೆ ೧೦ ಚೀಲ ಬೆಳೆಯುವಲ್ಲಿ ೧೦೦ ಚೀಲ ಬೆಳೆಯುವಂತಹ ವ್ಯವಸ್ಥೆ ಮಾಡಲಾಯಿತು. ನೀರಾವರಿ ಸಾಲಗಳನ್ನು ಕೊಡಲಾಗುತ್ತಿದೆ. ನಮ್ಮ ರಾಷ್ಟ್ರದ ಮಾಜಿ ಪ್ರಧಾನಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಉತ್ತಮ ಊಟವನ್ನು ಮಾಡಲಿಕ್ಕೆ ಅನ್ನದ ಕೊರತೆ ಇದೆ ಎಂದು ಹೇಳಿದರು. ಒಂದು ಹೊತ್ತು ಊಟವನ್ನು ಬಿಡಲಿಕ್ಕೆ ಅವರು ಜನತೆಯನ್ನು ಕೋರಿದರು. ಈ ದೇಶದ ರೈತ ಬಾಂಧವರು ಅನ್ನ ಹಾಕಲಿಕ್ಕೆ ಮುಂದೆ ಬಂದಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಅವರ ಬಗ್ಗೆ ಯಾವುದೇ ಹೊಸ ವಿಚಾರವೂ ಇಲ್ಲ. ಹಸಿರು ಕ್ರಾಂತಿಯನ್ನು ಮಾಡುವ ದಿಸೆಯಲ್ಲಿ ಏನು ಮಾಡಬೇಕು. ಹಸಿರು ಕ್ರಾಂತಿಗೆ ಅನುಗುಣವಾಗಿ ಪ್ರಸ್ತಾಪ ಇದರಲ್ಲಿ ಆಗಿದೆಯೇ ವಿನಹ ಈ ದಶಕಗಳಿಗೂ ಮೇಲ್ಪಟ್ಟು ಅಧಿಕಾರವನ್ನು ನಡೆಸಿದ ಸರ್ಕಾರ ಕೇಂದ್ರದಲ್ಲಿ ಆಗಲಿ ಅಥವಾ ರಾಜ್ಯದಲ್ಲಿಯೇ ಆಗಲಿ ಬಹುತೇಕ ಕಾಲ ಆಡಳಿತ ನಡೆಸಿದಂತಹ ಸರ್ಕಾರ ಆಡಳಿತದ ವ್ಯವಸ್ಥೆ ರೈತರ ಅಭಿರುಚಿಗೆ ಶ್ರಮಿಸುವಂತಹ ಕೆಲಸ ಮಾಡಬೇಕಿತ್ತು.

(ಶ್ರೀ ಸಜೀ. ವಿಕಾಂತಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದರೆ ಈ ದೇಶದಲ್ಲಿ ಅನ್ನದಾತ ರೈತನು ಎಂದು ಹೇಳುವಂತಹ ದಿಸೆಯಲ್ಲಿ, ದೇಶದ ಬೆನ್ನೆಲುಬು ರೈತ ಎಂದು ಹೇಳುವಂಥವರು ರೈತರ ಆರ್ಥಿಕ ಅಭಿವೃದ್ಧಿಯ ಬಗ್ಗೆ ದೇಶದ ಆಡಳಿತ ವ್ಯವಸ್ಥೆಯಲ್ಲಿ ಇವರ ಯೋಚನೆಯನ್ನೇ ಮಾಡಲಿಲ್ಲ. ಯಾವುದೇ ಯೋಜನೆಯನ್ನು ಹಾಕಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಆತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಅದೇರೀತಿ ಈ ರಾಜ್ಯಪಾಲರ ಭಾಷಣದಲ್ಲೂ ಸಹಿತ ಈ ವಿಷಯ ಪ್ರಸ್ತಾಪವಾಗಿಲ್ಲ. ರೈತ ಬೆಳೆಯನ್ನು ಕಷ್ಟಪಟ್ಟು ಬೆಳೆದರೂ ಸಹ, ಬೆಳೆದಂಥ ವ್ಯವಸಾಯದ ಉತ್ಪನ್ನಗಳಿಗೆ ಲಾಭದಾಯಕವಾದ ಬೆಲೆಯನ್ನು ಕೊಡಲಿಕ್ಕೆ ಈವರೆಗೂ ಯಾವುದೇ ರೀತಿಯ ಕಾರ್ಯಕ್ರಮವಿಲ್ಲ. ಅಷ್ಟೇ ಅಲ್ಲ ಈ ದೇಶದಲ್ಲಿ ಕೇಂದ್ರಸರ್ಕಾರವಾಗಲಿ ರಾಜ್ಯಸರ್ಕಾರವಾಗಲಿ ದೇಶದ ಆಡಳಿತ ಸೂತ್ರವನ್ನು ಹಿಡಿದಂಥ ಕಾಂಗ್ರೆಸ್ ಸರ್ಕಾರವಾಗಲಿ ಇದರ ಬಗ್ಗೆ ಯೋಚನೆ ಮಾಡದೇ ಇರುವುದು ಈ ದೇಶದ ದುರದೃಷ್ಟಕರವೆಂದು ನೂರಕ್ಕೆ ಎಪ್ಪತ್ತರಷ್ಟು ಇರುವ ವ್ಯವಸಾಯಗಾರರ

ಪರವಾಗಿ ಈ ಮಾತನ್ನು ನಾನು ವ್ಯಕ್ತಪಡಿಸಬಯಸುತ್ತೇನೆ. ಈಗಲೂ ಸಹಿತ ರಾಜ್ಯಪಾಲರ ಭಾಷಣದಲ್ಲಿ ರೈತ ಬೆಳೆದಂಥ ಮಾಲಿಗೆ ಲಾಭದಾಯಕವಾದಂಥ ಬೆಲೆಯನ್ನು ಸೂಚಿಸುವಂಥ ಮಾತು ಇಲ್ಲ. ಹತ್ತಿಯ ಬೆಲೆ ಮೊನ್ನೆಮೊನ್ನೆವರೆಗೆ ೧೮೦೦ ರೂಪಾಯಿ ಇದ್ದದ್ದು ಇವತ್ತು ೭೦೦ ರೂಪಾಯಿಗೆ ಇಳಿದಿದೆ. ಹೀಗಾದರೆ ರೈತನ ಸ್ಥಿತಿ ಏನಾಗಬೇಕು, ಹೀಗಿರುವಾಗ ರೈತನ ಆರ್ಥಿಕ ಪರಿಸ್ಥಿತಿ ಸಂಧಾರಿಸಲಿಕ್ಕೆ ಸಾಧ್ಯವೇ ಎಂದು ಈ ಸದನದಲ್ಲಿ ಈ ಕಡೆ ಮತ್ತು ಆ ಕಡೆ ಇರತಕ್ಕಂಥ ಸ್ನೇಹಿತರು ನಾವೆಲ್ಲರೂ ಬಹುತೇಕ ರೈತನ ಮಕ್ಕಳೇ ಇರುವುದರಿಂದ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ರಾಜ್ಯಸರ್ಕಾರದ ವ್ಯವಸ್ಥೆ ಏನಿದೆ ಎನ್ನುವ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ, ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕೇವಲ ರೈತರ ಉದ್ಧಾರ ಮಾಡುತ್ತೇವೆ ಹಸಿರುಕ್ರಾಂತಿ ಮಾಡುತ್ತೇವೆ ಎಂದು ಹೇಳಿ ದೇಶಕ್ಕೆ ಅನ್ನ ಕೊಡತಕ್ಕ ರೈತನನ್ನು ಸಾಲಗಾರನನ್ನಾಗಿ ಮಾಡತಕ್ಕಂಥ ಕಾರ್ಯಕ್ರಮವನ್ನು ಇಲ್ಲಿಯವರೆಗೆ ಈ ದೇಶವನ್ನು ಆಳಿದಂಥ, ಆಡಳಿತವನ್ನು ನಡೆಸಿಕೊಂಡು ಬಂದಂಥ ಬಹುತೇಕ ಕಾಂಗ್ರೆಸ್‌ನವರ ನೀತಿಯಿಂದಾಗಿ ರೈತರು ಇವತ್ತು ದಿವಾಳಿಯ ಅಂಚಿನಲ್ಲಿದ್ದಾರೆ. ಇದರ ಬಗ್ಗೆ ಈಗಲೂ ಸಹಿತ ಸರ್ಕಾರ ವಿಚಾರವನ್ನು ಮಾಡಿಲ್ಲ ಎಂದು ವಿಷಾದದಿಂದ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ ಇದರ ಬಗ್ಗೆ ಸರ್ಕಾರ ವಿಚಾರವನ್ನು ಮಾಡದೇ ಹೋದರೆ, ರೈತನ ಬೆಳೆಗೆ ಲಾಭದಾಯಕವಾದ ಬೆಲೆಯನ್ನು ಕೊಡದೇ ಹೋದರೆ ಇವತ್ತಿನದಿವಸ ರೈತರು ಈ ರಾಷ್ಟ್ರದಲ್ಲಿ ಸೈನ್ಯದಆಕಾರವಾಗಿ ಬರಬೇಕಾಗುತ್ತದೆ. ರೈತನ ಬೆಳೆಗೆ ಲಾಭದಾಯಕವಾದ ಬೆಲೆಯನ್ನು ದೊರಕಿಸಲಿಕ್ಕೆ ಸರ್ಕಾರ ಯಾವುದೇ ಕಾರ್ಯಮಕ್ರಮವನ್ನು ಹಾಕಿಕೊಳ್ಳದೇ ಹೋದರೆ ರೈತರಿಗೆ ತೊಂದರೆಯಾಗುತ್ತದೆ, ಭಾರತ ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಮಾಡುವಾಗ ಬಡ ರೈತ ಹಾಗೂ ಕೂಲಿಗಾರರ ಬಗ್ಗೆ ವಿಚಾರ ಮಾಡದೇ ಇದ್ದರೆ ಇವತ್ತು ರೈತರನ್ನು ಸಾಲಗಾರರನ್ನಾಗಿ ಮಾಡಿ, ಅವನು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬೆಳೆದು ಸಾಲಗಾರರ ಮಗನಾಗಿ ಹೋಗುವಂಥ ಪರಿಸ್ಥಿತಿ ಉದ್ಭವಿಸಿರತಕ್ಕಂಥಾದ್ದು ದುರದೃಷ್ಟಕರ. ಮಹಾರಾಷ್ಟ್ರದಲ್ಲಿ ಸಮಗ್ರವಾಗಿ ಬೆಳೆದಂಥ ಹತ್ತಿಗೆ ಒಂದು ನಿಗಮ ಮಾಡಿ ತನ್ಮೂಲಕ ಹತ್ತಿಯನ್ನು ಖರೀದಿಮಾಡಿ ಮಿಲ್ಲುಗಳಿಗೆ ಕೊಡುವಂಥ ವ್ಯವಸ್ಥೆ ಮಾಡಿದ್ದರಿಂದ ಇವತ್ತಿನದಿವಸ ಬೆಳೆಗಾರರಿಗೆ ಯೋಗ್ಯ ಬೆಲೆ ಸಿಗುತ್ತಿದೆ. ಇವತ್ತಿನದಿವಸ ಮಿಲ್ಲಿನಿಂದ ಯೋಗ್ಯ ಬೆಲೆಗೆ ಬಡವರು ಬಟ್ಟೆಯನ್ನು ಕೊಳ್ಳಲಿಕ್ಕೆ ಸಿಗುವಂಥ ವ್ಯವಸ್ಥೆ ಇದೆ. ನಮ್ಮಲ್ಲಿ ಹತ್ತಿ ಬೆಲೆ ೧೮೦೦ ರಿಂದ ೭೦೦ ರೂಪಾಯಿಗೆ ಇಳಿದಿರುವಾಗ ಸರ್ಕಾರ ಕೂಡಲೇ ಫೆಡರೇಷನ್‌ನವರಿಗೆ, ಸಿ.ಸಿ.ಐ.ನವರಿಗೆ ಹತ್ತಿಯನ್ನು ಕೊಳ್ಳಲಿಕ್ಕೆ ಸೂಕ್ತಆದೇಶ ಕೊಡಬೇಕು, ಮುಂದೆ ಹೆಚ್ಚು ಆರ್ಥಿಕಾಭಿವೃದ್ಧಿಯಾಗುವಂತೆ ಇಂತಹ ಸಂಸ್ಥೆಗಳನ್ನು ಪ್ರಾರಂಭಿಸಬೇಕು ಎಂದು ನಾನು ರೈತರ ಪರವಾಗಿ ಸರ್ಕಾರದಲ್ಲಿ ವಿನಮಿಯಂನ್ನು ಮಾಡುತ್ತಾ ಇದ್ದೇನೆ. ಇದರ ಬಗ್ಗೆ ಒಂದು ಯೋಚನೆ ಆಗದೇ ಹೋದರೆ ರೈತರು ಸಾಲಗಾರರಾಗಿ ಹೋಗುವಂಥದ್ದು, ಹೋಗುವುದು ಅನಿವಾರ್ಯವಾಗಿ, ಆ ಸಾಲವನ್ನು ಸೂಟ್ ಮಾಡಿರಿ ಎಂದು ಹೇಳುವುದೂ ಕೂಡ ಅನಿವಾರ್ಯವಾಗುತ್ತದೆ. ಇವತ್ತು ದೇಶದಲ್ಲಿ ರೈತರು ಭಿಕ್ಷೆ ಬೇಡುತ್ತಿಲ್ಲ. ಅನ್ನ ಕೊಡುವಂಥ ರೈತರಿಗೆ ಆರೆಹೊಟ್ಟೆ ಅನ್ನ ಊಟ ಮಾಡುವಂಥ ಪರಿಸ್ಥಿತಿ ಬರಲಿಕ್ಕೆ ದೇಶದಲ್ಲಿರುವ ದುರಾಡಳಿತವೇ ಕಾರಣ ಎನ್ನುವ ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛಿಸುತ್ತಾ ಇದ್ದೇನೆ: ಇವತ್ತು ದುಡಿದು ಬೆವರು ಸುರಿಸಿದಂಥ ರೈತ, ಕಷ್ಟಪಟ್ಟು ದುಡಿದ ಕೂಲಿಕಾರರಿಗೆ ಅನ್ನವಿಲ್ಲದ ಗತಿ ಬರುವುದಕ್ಕೆ, ಮೈಗೆ ಬಟ್ಟೆ ಇಲ್ಲದ ಪರಿಸ್ಥಿತಿ ಬರಲಿಕ್ಕೆ ಈ ರಾಷ್ಟ್ರದಲ್ಲಿ ಆಡಳಿತ ಮಾಡಿದವರು ಯಾರಿದ್ದಾರೆ ಅವರು ಕಾರಣವೆಂದು ಹೇಳಬೇಕಾಗಿದೆ. ನಾಲ್ಕಾರು ವರ್ಷಗಳ ಕಾಲ ವಿರೋಧಪಕ್ಷದ ಸರ್ಕಾರ ಈ ರಾಜ್ಯದಲ್ಲಿ ಇರಬಹುದು. ಅಂದಮಾತ್ರಕ್ಕೆ ಅದನ್ನು ನಮ್ಮ ಸ್ನೇಹಿತರು ಎತ್ತಿ ತೋರಿಸುತ್ತಾ ಇದ್ದಾರೆ. ಒಂದೆರಡು ವರ್ಷಗಳ ಕಾಲ ಬಿಟ್ಟರೆ ದೇಶದಲ್ಲಿ ಬಹಳಷ್ಟು ಕಾಲ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು, ರಾಷ್ಟ್ರಮಟ್ಟದಲ್ಲಿ ರೈತನ ಬೆಳೆಗೆ ಯೋಗ್ಯ ಬೆಲೆ ಕೊಡತಕ್ಕಂಥ ವ್ಯವಸ್ಥೆ ಆಗಬೇಕಾಗಿತ್ತು, ಆದರ ಬಗ್ಗೆ ಯಾವ ಯೋಚನೆ ಇಲ್ಲದೇ ಅದೇರೀತಿ ಇಲ್ಲ ಸಹಿತ ವ್ಯವಸಾಯವನ್ನೇ ಮುಂದುವರಿಸಿಕೊಂಡು ಬಂದಿರತಕ್ಕಂಥ ಬೆಳೆಗಾರರ ಬಗ್ಗೆ, ಅವರ ಆರ್ಥಿಕಾಭಿವೃದ್ಧಿಯ ಬಗ್ಗೆ ಯೋಚನೆಯನ್ನು ಮಾಡಿ ನೀತಿ ನಿಯಮಗಳನ್ನು, ಅಥವಾ ರೂಪುರೇಷೆಗಳನ್ನು ರೂಪಿಸುವ ಬಗ್ಗೆ ರಾಜ್ಯಪಾಲರು ಪ್ರಸ್ತಾಪಿಸದೇ ಇರುವುದು ಸರಿಯಲ್ಲ. ರೈತರಿಂದ ಬಹುಮತ ಪಡೆದು ೧೭೨ಜನ ನಮ್ಮ ಸ್ನೇಹಿತರು ಏನು ಬಂದಿದ್ದಾರೆ, ಅವರೂ ಸಹಿತ ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಆ ಸ್ಥಾನದಿಂದ ಇವತ್ತು ಇದು ಸೇರ್ಪಡೆಯಾಗಬೇಕಾಗಿದೆ. ಇವತ್ತು ಹತ್ತಿ ಕಾರ್ಪೊರೇಷನ್ ಮಾಡಿ ಹತ್ತಿ ಬೆಳೆಗೆ ಯೋಗ್ಯ ಬೆಲೆ ಸಿಗುವಂತೆ ಆಗಬೇಕಾಗಿದೆ. ಅದೇರೀತಿ ಮೆಣಸಿನಕಾಯಿ ಬೆಲೆ ಇಳಿದಿರುವುದರಿಂದ ಇದಕ್ಕೆ ಒಂದು ಕಾರ್ಪೊರೇಷನ್ ಆಗಬೇಕಾಗಿದೆ, ಅದನ್ನು ಕೊಂಡು ಮಾರಾಟ ಮಾಡುವಂಥ ವ್ಯವಸ್ಥೆಯಾಗಬೇಕಾಗಿದೆ. ಇವತ್ತು ರೈತ ಬೀದಿ ಪಾಲು ಆಗಲಿಕ್ಕೆ, ಸಾಲಗಾರ ಆಗಲಿಕ್ಕೆ, ಯಾರು ಕಾರಣ ? ರೈತ ಹೊಸ ಬೀಜ

ಕೊಳ್ಳಬೇಕು, ಗೊಬ್ಬರ ಕೊಳ್ಳಬೇಕು, ಕ್ರಿಮಿನಾಶಕಗಳನ್ನು ಕೊಳ್ಳಲಿಕ್ಕೆ ನೀವು ಸಾಲಗಳನ್ನು ಕೊಟ್ಟಿರಿ. ರೈತ ಅದನ್ನೆಲ್ಲಾ ಕೊಂಡು ಭೂಮಿಯಲ್ಲಿ ಹಾಕಿದ ಕೂಡಲೆಗೆ ಉತ್ಪನ್ನ ಅವನ ಕೈಗೆ ಸಿಗದಂತಾಗಿದೆ. ಇದಕ್ಕೆ ಸರ್ಕಾರದ ಅವ್ಯವಸ್ಥೆಯೇ ಕಾರಣ. ಆದ್ದರಿಂದ ಸಣ್ಣ ರೈತ, ದೊಡ್ಡ ರೈತ ಎಂಬ ಭೇದ ಭಾವವನ್ನು ಮರೆತು ರೈತರಿಗೆ ಸಹಾಯ ಮಾಡಬೇಕು. ರೈತ ಅತಿವೃಷ್ಟಿ, ಅನಾವೃಷ್ಟಿಯಿಂದ ಕಂಗಾಲಾಗಿದ್ದಾನೆ. ವಿದ್ಯುತ್ತಿನ ವಿಳಂಬದಿಂದ ತೊಂದರೆಯಾಗಿದೆ. ಸರ್ಕಾರಕ್ಕೆ ವಿದ್ಯುತ್ ಸರಬರಾಜು ಇಲ್ಲದೇ ಇರುವುದರಿಂದ ರೈತರು ನೀರಾವರಿ ಇಲ್ಲದೆ ಹಾನಿಗೀಡಾಗಿದ್ದಾರೆ. ಆದ್ದರಿಂದ ನೀರಾವರಿ ಯೋಜನೆಗಳಿಂದ ನೀರನ್ನು ಒದಗಿಸಬೇಕು, ಕಾಲುವೆಗಳ ಮೂಲಕ ನೀರನ್ನು ರೈತರ ಜಮೀನಿಗೆ ಒದಗಿಸುವಂಥ ವ್ಯವಸ್ಥೆಯಾಗಬೇಕು. ಇಲ್ಲದೇಹೋದರೆ ಇದರಿಂದ ರೈತರಿಗೆ ತೊಂದರೆ ಇದೆ.

ಶ್ರೀ-ಷಿ ಪಿ.ಎಂ.

ಸಮಗ್ರವಾಗಿ ರೈತರ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕು; ಕೇಂದ್ರ ಸರ್ಕಾರದವರು ರೂ. ೧೦,೦೦೦ ದ ಗಿನ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತೇವೆಂದು ಸ್ಪಷ್ಟಪಡಿಸಿದ್ದಾರೆ, ತಾವು ಇಲ್ಲಿ ರಾಜ್ಯಪಾಲರ ಭಾಷಣ ಒಂದು ಶಬ್ದವನ್ನೂ ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ ಯಾವ ವರ್ಗ ಸರ್ಕಾರಕ್ಕೆ ಸದೃಢವಾದ ಬೆಂಬಲವನ್ನು ಕೊಟ್ಟಿದೆಯೋ ದುಡಿಯುವ ರೈತ ಈ ವರ್ಗದ ಪರವಾಗಿ ನಾನು ತಮ್ಮಲ್ಲಿ ಮುಖ್ಯಾಂತರ ವಿನಂತಿ ಮಾಡಿಕೊಳ್ಳುವುದು, ರೈತ ಸಮುದಾಯದ ಸಮಗ್ರಸಾಲವನ್ನು ಮನ್ನಾ ಮಾಡಬೇಕು.

ಕಬ್ಬಿನ ಬೆಲೆಯ ವಿಚಾರದಲ್ಲಿ ಹೇಳುವುದಾದರೆ, ಬೇರೆ ಬೇರೆ ರಾಜ್ಯಗಳಲ್ಲಿ ೪೦೦ ರಿಂದ ೪೫೦ ರೂಪಾಯಿಗಳಿಗೆ ಒಂದು ಟನ್ ಇದೆ. ನಮ್ಮಲ್ಲಿ ಮಾತ್ರ ೩೫೦ ರೂಪಾಯಿಗಳಿಗೆ ಒಂದು ಟನ್ ಮಾರಾಟ ಮಾಡುವಂತ ವ್ಯವಸ್ಥೆ ಇದೆ. ನೆರೆಹೊರೆಯ ರಾಜ್ಯಗಳವರು ಯಾವ ಒಂದು ಸೂತ್ರವನ್ನು ಅನುಸರಿಸಿ ಹೆಚ್ಚಿನ ಬೆಲೆಯನ್ನು ಕಬ್ಬಿಗೆ ಕೊಡುತ್ತಾರೋ, ಆಥ ಒಂದು ಬೆಲೆಯನ್ನು ನಮ್ಮ ರಾಜ್ಯದ ರೈತ ಬೆಳೆದ ಕಬ್ಬಿಗೆ ಕೊಡುವಂಥ ಸುತ್ತೋಲೆಯನ್ನು ಕೂಡಲೇ ಸರ್ಕಾರದವರು ಹೊರಡಿಸಬೇಕು. ಜುಲೈ ತಿಂಗಳಲ್ಲಿ ಸರ್ಕಾರಿ ಆಜ್ಞೆ ಚಾಲೂ ಆಗಬೇಕಿತ್ತು. ಆದರೆ, ಇದುವರೆಗೂ ಸರ್ಕಾರದ ಆಜ್ಞೆ ಚಾಲೂ ಆಗಿಲ್ಲ. ಈ ವಿಚಾರದಲ್ಲಿ ಸರ್ಕಾರ ತಡ ಮಾಡದೇ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯಂತೆ ಆರೆ ಮಲೆನಾಡಿನಲ್ಲಿ ಮಳೆಗಾಲ ಕಡಿಮೆಯಾಗಿ ಕೆರೆ ಕಟ್ಟೆಗಳಿಗೆ ನೀರು ಬರದೆ, ರೈತರು ತುಂಬಾ ಕಷ್ಟಕ್ಕೆ ಗುರಿಯಾಗಿದ್ದಾರೆ. ಆದೇರೀತಿ ಬಯಲು ಪ್ರದೇಶಗಳ ರೈತರು ಕೂಡ ಕಾಲಕ್ಕೆ ಸರಿಯಾಗಿ ಮಳೆಯಾಗದೆ ಹೋದುದರಿಂದ, ಬೆಳೆ ಸಿಗದೇ ತೊಂದರೆ ಪಡುತ್ತಿದ್ದಾರೆ. ಬಿತ್ತಿದ ಬೀಜ ಮೊಳಕೆಯೊಡೆದು ಪೀಕು ನಾಶವಾಗಿದೆ. ಮುಂಗಾರು ಮಳೆ ಸಕಾಲಕ್ಕೆ ಬರದೇ, ಧಾರವಾಡ ಜಿಲ್ಲೆಯ ರಾಣಿಬೆನ್ನೂರು, ಧಾರವಾಡ ತಾಲ್ಲೂಕುಗಳಲ್ಲಿ ಬರಗಾಲ ತಾಂಡವಾಡುತ್ತಿದ್ದು, ಜನ ತುಂಬಾ ಕಷ್ಟದಲ್ಲಿದ್ದಾರೆ. ಕೂಡಲೇ ಸರ್ಕಾರದವರು ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸದನದ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ನೀರಾವರಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀರಿನ ಸಮರ್ಥ ಬಳಕೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ೨೧೦೦ ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ರಚನಾತ್ಮಕ ಸಲಹೆಗಳನ್ನು ಕೊಡುತ್ತೇನೆ. ಬಚಾವತಿ ತೀರ್ಪಿನ ಪ್ರಕಾರ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಬೇಕಾಗಿದೆ. ಅತಿ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ನೀರಾವರಿಯಾಗುವಂಥ ಅಪ್ಪರ್ ತುಂಬಾ ಯೋಜನೆಯನ್ನು ಸರ್ಕಾರದವರು ಕಾಲಹರಣ ಮಾಡದೇ ಕೈಗೆತ್ತಿಕೊಳ್ಳಬೇಕು. ಇವತ್ತು ರೈತ ದುಡಿಯಲಿಕ್ಕೆ ತಯಾರಿದ್ದಾನೆ. ರೈತನ ಜಮೀನಿಗೆ ನಿರಾವರಿ ಸೌಲಭ್ಯ ಆಗಬೇಕಾಗಿದೆ. ತುಂಗಾ ನದಿಗೆ ಯಾವುದೇ ಆಣೆ ಟ್ಟು ಕಟ್ಟಬೇಕಾಗಿಲ್ಲ. ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿಲ್ಲ. ಜಮೀನು ಮುಳುಗಡೆಯಾಗುವುದಿಲ್ಲ. ಪಂಚಾಯತ್ ಆಯೋಗದವರು ನಮ್ಮ ಭಾಗದ ನೀರನ್ನು ಉಪಯೋಗಿಸಲು ಅನುಮತಿ ಕೊಟ್ಟಿರುವುದರಿಂದ ಅಪ್ಪರ್ ತುಂಗಾ ಯೋಜನೆಯನ್ನು ಕೈಗೆತ್ತಿಕೊಂಡರೆ ಅತಿ ಕಡಿಮೆ ವಿರ್ಚಿನಲ್ಲಿ ಯೋಜನೆ ಮುಗಿದು ಶಿವಮೊಗ್ಗ ತಾಲ್ಲೂಕಿನಲ್ಲಿ ೫,೯೦೦ ಎಕರೆ, ಹೊನ್ನಾಳಿ ತಾಲ್ಲೂಕಿನಲ್ಲಿ ೧೪,೦೦೦ ಎಕರೆ, ಹೀರೆಕೇನೂರು ತಾಲ್ಲೂಕಿನಲ್ಲಿ ೩೦,೯೦೦ ಎಕರೆ ರಾಣಿಬೆನ್ನೂರು ತಾಲ್ಲೂಕಿನಲ್ಲಿ ಒಂದು ಲಕ್ಷ ಏಳುಸಾವಿರ ಎಕರೆ, ಹಾವೇರಿ ತಾಲ್ಲೂಕಿನಲ್ಲಿ ೮೫,೦೦೦ ಎಕರೆ, ಹಾನಗಲ್ ತಾಲ್ಲೂಕಿನಲ್ಲಿ ೫,೦೯೦೦ ಎಕರೆ ಹೀಗೆ ಒಟ್ಟು ಎರಡು ಲಕ್ಷ ಮೂವತ್ತೆಂಟು ಸಾವಿರ ಎಕರೆ ಜಮೀನಿಗೆ ನೀರು ಸಿಗುತ್ತದೆ. ಆದ್ದರಿಂದ, ಇವೊತ್ತು ಅತೀ ಸುಲಭವಾದ ವಿರ್ಚಿನಿಂದ ಒಂದು ಕಾಲುವೆಯನ್ನು ತೆಗೆದರೆ ಅಣೆಕಟ್ಟಿನ ಮೇಲೆ ಮಳೆಗಾಲದಲ್ಲಿ ಜುಲೈ, ಆಗಸ್ಟ್ ಸೆಪ್ಟೆಂಬರ್,

ಅಕ್ಟೋಬರ್ ನಾಲ್ಕು ತಿಂಗಳ ಕಾಲ ಆಣೆಕಟ್ಟು ಮೇಲೆ ನಿಳಿ ಅಡಿ ನೀರು ಹರಿದು ತುಂಗಭದ್ರಾ ಸೇರುತ್ತದೆ. ಎನ್.ಟಿ.ಆರ್.ರವರು ಮಾಡಿರತಕ್ಕ ತೆಲುಗುಗಂಗಾ ಯೋಜನೆಯಿಂದ ನಮ್ಮ ರಾಜ್ಯದ ಪಾಲಿನ ನೀರು ವ್ಯರ್ಥವಾಗಿ ಏನು ಹೋಗುತ್ತದೆ ಅದಕ್ಕೆ ಒಂದು ಕಬ್ಬಿಣದ ಗೇಟನ್ನು ಕೂರಿಸಿ ಕಾಲುವೆ ತೆಗೆದರೆ ಮೂನ್‌ಸೂನ್ ಸಕಾಲಕ್ಕೆ ಬಾರದೇ ಇರುವ ಧಾರವಾಡ ಜಿಲ್ಲೆ ದಕ್ಷಿಣ ಭಾಗದಲ್ಲಿ ಎರಡು ಲಕ್ಷ ಒಲೆ ಸಾವಿರ ಎಕರೆಯಲ್ಲಿ ರೈತರ ಬೆಳೆ ಏನು ಹಾಳಾಗುತ್ತಿದೆ. ಅದನ್ನು ರಕ್ಷಣೆ ಮಾಡುವಂಥ ಸುಲಭ ಯೋಜನೆ ಈಡೇರುತ್ತದೆ. ನೆನ್ನೆಯ ದಿವಸ ಈ ವಿವರಗಳನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಕೊಟ್ಟಿದ್ದೇನೆ. ನಮ್ಮ ನಾಯಕರಾದಂಥ ಹೆಗಡೆಯವರು, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ರುವುದರಿಂದ ಅವರಿಗೂ ಸಹ ಕೊಟ್ಟಿದ್ದೇನೆ. ಸುಲಭ ಖರ್ಚಿನಿಂದ ಹೆಚ್ಚು ನೀರಾವರಿ ಮಾಡತಕ್ಕಂಥ ಯೋಜನೆ ತೀವ್ರ ಕಾರ್ಯರೂಪದಲ್ಲಿ ಆಗಬೇಕು. ಈ ಯೋಜನೆಯ ನಕ್ಷೆ ತಯಾರಾಗಿದೆ, ಅಂದಾಜು ಪತ್ರ ತಯಾರಾಗಿದೆ. ರಾಜ್ಯದ ತಾಂತ್ರಿಕ ಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ. ತೀವ್ರವಾಗಿ ಸಮಿತಿಯವರು ಒಪ್ಪಿಗೆ ಪಡೆದು ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಕೇಂದ್ರ ಸರ್ಕಾರದ ಯೋಜನೆ ಯಲ್ಲಿ ಸೇರಿಸಬೇಕು. ಎಂಟನೇ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಈ ಯೋಜನೆ ಯನ್ನು ಸೇರಿಸಬೇಕೆಂದು ಹೇಳುತ್ತೇನೆ. ೧೯೦೬ನೇ ಇಸವಿಯಲ್ಲಿ ಆದಂಥ ಈ ಒಂದು ಯೋಜನೆ ಇನ್ನೂವರೆಗೂ ಆಗಿಲ್ಲ ಎಂದು ಹೇಳಲಿಕ್ಕೆ ವಿಷಾದಪಡುತ್ತೇನೆ. ಇದನ್ನು ನೋಡಿದರೆ ದೇಶವನ್ನು ಆಳತಕ್ಕವರಿಗೆ ರೈತರ ಪರವಾಗಿ ಎಷ್ಟು ಕಳಕಳಿ ಇದೆ ಎಂದು ಅರ್ಥವಾಗುತ್ತದೆ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಈಗಲಾದರೂ ಯೋಚನೆ ಮಾಡಬೇಕು. ಬ್ರಿಟಿಷರ ಕಾಲದಲ್ಲಿ ೧೯೦೬ನೇ ಇಸವಿಯಲ್ಲಿ ಆದಂಥ ಯೋಜನೆ ಇದು. ಇಂತಹ ಸುಲಭವಾದ ಯೋಜನೆ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಈ ಪ್ರಜಾ ತಂತ್ರಕ್ಕೆ ಏನು ಬೆಲೆ ಇದೆ ಎಂದು ರೈತರು ಅರಿತಿದ್ದಾರೆ. ಇವೊತ್ತು ನಮ್ಮ ರೈತಬಾಂಧವರು ನಮ್ಮನ್ನು ಬಹಿಷ್ಕಾರದಿಂದ ಅರಿಸಿ ಕಳುಹಿಸಿದ್ದಾರೆ. ಅವರ ಒಂದು ವಿಶ್ವಾಸಕ್ಕೆ ದ್ರೋಹಿಗಳಾಗಬೇಡಿ. ವಿಶ್ವಾಸವನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿ. ರೈತರ ಪರವಾದಂಥ, ಜನಪರವಾದಂಥ ಯೋಜನೆಗಳಿಗೆ ನಮ್ಮ ಸಹಕಾರ ಇದೆ. ಅಂತಹ ಒಂದು ಯೋಜನೆಗಳು ತ್ವರಿತವಾಗಿ ಆಗಬೇಕೆಂದು ಈ ಸದನದ ಎಲ್ಲ ಸದಸ್ಯರ ವಿನಂತಿ ಇದೆ. ಈ ಸದನದ ನಾಯಕರಾದಂಥ ಮಾನ್ಯ ವೀರೇಂದ್ರ ಪಾಟೀಲರು ತಮ್ಮ ಕಳಕಳಿಯನ್ನು ಈ ಬಗ್ಗೆ ವ್ಯಕ್ತಪಡಿಸಿರುವುದರಿಂದ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ, ಇದನ್ನು ಆದಷ್ಟು ತ್ವರಿತವಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ರೈತ ಒಂದು ಬೋರ್‌ಗೆ ಐ.ಪಿ ಸೆಟ್ ಹಾಕಿ ವ್ಯವಸಾಯವನ್ನು ಪ್ರಾರಂಭ ಮಾಡಬೇಕಾದರೆ ೫೦ ಸಾವಿರ ರೂಪಾಯಿಗಳ ಸಾಲ ಮಾಡುತ್ತಿದ್ದಾನೆ. ರೈತರಿಗೆ ವಿದ್ಯುತ್ ಶಿಕ್ಕಬೇಕಾದರೆ ಎರಡು ಮೂರು ವರ್ಷ ಆದರೂ ಬೇಕಾಗುತ್ತದೆ. ಅವನಿಗೆ ಬಡ್ಡಿ ೫೰ ಸಾವಿರ ರೂಪಾಯಿ ಬೀಳುತ್ತದೆ. ಅವನು ನೀರಾವರಿ ಕೆಲಸ ಪ್ರಾರಂಭ ಮಾಡದೆಯೇ ಬಡ್ಡಿ ಕೊಡಬೇಕೆಂದರೆ ಅವನು ಯಾವರೀತಿ ಬಡ್ಡಿಯನ್ನು ತುಂಬಬೇಕು. ಆ ರೈತ ಸಾಲವನ್ನು ಯಾವರೀತಿ ಪರಿಹಾರವಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ರೈತ ನೀರಾವರಿಗಾಗಿ ಎಲ್ಲಿ ಬೋರ್‌ವೆಲ್ ಹಾಕಿದ್ದಾನೆ ಅವನಿಗೆ ಒಂದೆರೆಡು ತಿಂಗಳಲ್ಲಿಯೇ ವಿದ್ಯುತ್ ಸರಬರಾಜು ಕೊಡುವಂಥ ವ್ಯವಸ್ಥೆಯಾಗಬೇಕು. ನಮ್ಮ ತಾಲ್ಲೂಕು ಉದಾಹರಣೆ ಹೇಳುವುದಾದರೆ ಸುಮಾರು ೨೫೦ ನೀರಾವರಿ ಪಂಪ್‌ಸೆಟ್‌ಗಳಿಗೆ ಎರಡು ವರ್ಷಗಳಿಂದಲೂ ರೈತರು ವಿದ್ಯುತ್‌ಗಾಗಿ ಕಾದು ಕುಳಿತಿದ್ದಾರೆ. ಈ ಬಗ್ಗೆ ಕೇಳಲಿಕ್ಕೆ ಹೋದರೆ ವಿದ್ಯುತ್ ತಂತಿ ಇಲ್ಲ ಆದ್ದರಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಆದ್ದರಿಂದ, ಸರ್ಕಾರ ಆ ಕಡೆ ಗಮನಹರಿಸಿ ಸ್ವಂತ ನೀರಾವರಿಗೋಸ್ಕರ ಮಾಡಿ ಕೊಂಡಿರತಕ್ಕವರಿಗೆ ಎರಡು ಮೂರು ತಿಂಗಳಲ್ಲಿಯೇ ವಿದ್ಯುತ್ ಪೂರೈಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ದೇಶಕ್ಕಾಗಿ ಅನ್ನ ಕೊಡತಕ್ಕ ರೈತನ ಬಗ್ಗೆ, ದೇಶದ ಬೆನ್ನೆಲುಬು ಆಗಿರತಕ್ಕ ರೈತನ ಬಗ್ಗೆ ಕಣ್ಣೀರು ಮಾತ್ರ ಸುರಿಸಿ, ರೈತನ ಆರ್ಥಿಕ ಅಭಿವೃದ್ಧಿಯನ್ನು ಸುಧಾರಿಸಲಿಕ್ಕೆ ಯಾವುದೇ ವಿಚಾರವನ್ನು ಇದರಲ್ಲಿ ಹೇಳಿಲ್ಲ. ಅದನ್ನು ವಿಷಾದದಿಂದ ಹೇಳಬೇಕಾಗಿದೆ. ಹಿಂದಿನ ಆಡಳಿತದ ವೈಖರಿಯನ್ನು ಮುಂದುವರಿಸದೆ. ಜನಪರವಾದ ರೈತರ ಪರವಾದ ಕೆಲಸವನ್ನು ಮಾಡಬೇಕು. ನೂರಕ್ಕೆ ಎಂಭತ್ತರಷ್ಟು ರೈತರು ಈ ದೇಶದಲ್ಲಿರುವಂಥ ಗ್ರಾಮೀಣ ಭಾಗದ ಜನರಿಗೆ ನೂರಕ್ಕೆ ಇಪ್ಪತ್ತರಷ್ಟು ಇವೊತ್ತು ಅಭಿವೃದ್ಧಿಗಾಗಿ ಬಳಕೆಯಾಗುತ್ತಿದೆ. ನೂರಕ್ಕೆ ಇಪ್ಪತ್ತರಷ್ಟು ಜನ ಇರತಕ್ಕಂಥ ಶಹರಾದಲ್ಲಿ ನೂರಕ್ಕೆ ಎಂಭತ್ತರಷ್ಟು ಹಣವನ್ನು ಆಯವ್ಯಯದಲ್ಲಿ ಯೋಜನೆಗಳಿಗೆ ವಿನಿಯೋಗ ಮಾಡುವ ವ್ಯವಸ್ಥೆಯನ್ನು ನಿಲ್ಲಿಸಿ ಗ್ರಾಮೀಣ ಜನ ರೈತರಿಗೆ ನೂರಕ್ಕೆ ಎಂಭತ್ತರಷ್ಟು ಹಣವನ್ನು ವಿನಿಯೋಗ ಮಾಡುವ ವ್ಯವಸ್ಥೆ ಈ ದೇಶದಲ್ಲಿ, ಈ ರಾಜ್ಯದಲ್ಲಿ ಬರಲಿ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈಹಿಂದ್

† ಶ್ರೀ ಹಲಗೇಗೌಡ (ಪಾಂಡವಪುರ).— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದಮೇಲೆ ಮಾಡಿದಂಥ ಸಲಹೆಗಳನ್ನು, ನೀಡಿದಂಥ ಸೂಚನೆಗಳನ್ನು ಆದರಲ್ಲೂ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಚಂದ್ರೇಗೌಡರ ಚಂದ್ರನ ಬೆಳಕಿನಂಥ ಭಾಷಣವನ್ನು ನಾನು ಸ್ವಾಗತಿಸುತ್ತಾ, ಅವರು ಕೂಟ್ಟಿರತಕ್ಕ ಕೆಲವು ಉತ್ತಮ ಸಲಹೆಗಳನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಬಹಪಾಲು ಭಾಷಣವನ್ನು ಅವರೇ ಒಪ್ಪಿಕೊಂಡಿದ್ದಾರೆ. ಆ ಭಾಷಣಕ್ಕೆ ಅವರು ಒಪ್ಪಿ ಕೊಂಡಿದ್ದಕ್ಕೆ ಅವರು ಕೆಲವು ಸಲಹೆಗಳನ್ನು ಮಾತ್ರ ನೀಡಿದ್ದಾರಷ್ಟೆ ಮಾನ್ಯ ರಾಜ್ಯಪಾಲರ ಭಾಷಣವನ್ನು ಅವರೇನೂ ತಿರಸ್ಕರಿಸಿಲ್ಲವಾದ್ದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ಮಾತನಾಡುವಾಗ ಕೆಲವು ವಿಷಯಗಳನ್ನು ಹೇಳಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕ್ರಿಯಾಪದಗಳೇ ಇಲ್ಲ, ಎಂದು ಹೇಳಿದ್ದಾರೆ. ಸ್ವಾಮಿ, ಪ್ರತಿಯೊಂದು ಪುಟದಲ್ಲಿಯೂ ಪ್ರತಿಯೊಂದೂ ಪ್ಯಾರಾದಲ್ಲಿಯೂ ಕ್ರಿಯಾಪದಗಳು ಇವೆ. ಆದರೆ ಅವುಗಳನ್ನು ನೋಡುವ ಮನಸ್ಸು ಅವರಿಗಿರಬೇಕು ಅಷ್ಟೆ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎನ್ನುವಂತಾಗಬಾರದು. ರಾಜ್ಯಪಾಲರು ಎಷ್ಟೇ ಸಂಯಮದಿಂದ ಹೇಳಿದರೂ ಅದರ ಬಗ್ಗೆ ಉದಾರ ಮನಸ್ಸನ್ನು ತಾಳದೆ ಅದರಲ್ಲಿ ತಪ್ಪನ್ನೇ ಹುಡುಕುತ್ತಾ ಹೋಗತಕ್ಕ ಮನಸ್ಸು ಮಾನ್ಯ ವಿರೋಧಿಪಕ್ಷದ ಸದಸ್ಯರಲ್ಲಿದೆ ಎಂದು ನನಗೆ ಕಂಡುಬರುತ್ತದೆ. ಬಹುಶ: ಮಾನ್ಯ ರಾಜ್ಯಪಾಲರು ಇದಕ್ಕಿಂತಲೂ ಸೌಮ್ಯವಾದ ಭಾಷಣವನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲವೇನೋ ಎಂದು ಅನಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯದ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಎಲ್ಲಾ ಕಾರ್ಯಕ್ರಮಗಳೂ ಇವೆ. ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದ ಯೋಜನೆಗಳೆಲ್ಲವೂ ಇವೆ. ಅವರು ವಿವರವಾದ ಪಟ್ಟಿಯನ್ನು ಕೊಡತಕ್ಕ ಕೆಲಸಕ್ಕೆ ಹೋಗದೆ ಬಹಳಷ್ಟು ವಿಷಯಗಳನ್ನು ಸಂಕ್ಷಿಪ್ತವಾಗಿ, ಮುಂದಾಗಿ ಹೇಳಿದ್ದಾರೆ. ಇದಕ್ಕಿಂತ ಅವರಿಗೆ ಇನ್ನೇನು ಬೇಕು ? ಆದರೆ ಮಾನ್ಯ ವಿರೋಧ ಪಕ್ಷದವರು ಮಾತನಾಡುತ್ತಾ ರಾಜ್ಯಪಾಲರ ಭಾಷಣದಲ್ಲಿ ಕ್ರಿಯಾಪದವೇ ಇಲ್ಲವೆಂದು ಹೇಳಿರುವುದು ಸರಿಯಲ್ಲ. ಏನೇ ಪುಟದಲ್ಲಿ ," ಗ್ರಾಮೀಣ ನೀರು ಪೂರೈಕೆ ಕಾರ್ಯಕ್ರಮದ ಮೇರೆಗೆ ರಾಜ್ಯದಲ್ಲಿನ ಎಲ್ಲಾ ವಸತಿಗಳಿಗೆ ಸುರಕ್ಷಿತವಾದ ಕುಡಿಯಂಥ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಹೊಸ ವಸತಿಗಳನ್ನು ಒಳಪಡಿಸುವುದರ ಜೊತೆಗೆ ಸಾಧಿಸಿದ ಯೋಜನೆಗಳನ್ನು ವೃದ್ಧಿಪಡಿಸಲಾಗುವುದು. ಅಂದರೆ ಸಾಕಷ್ಟು ಪ್ರಮಾಣದ ನೀರು ಪೂರೈಕೆಗೆ ಒತ್ತು ನೀಡಲಾಗುವುದು ," ಎಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ಏನೇ ಪುಟದಲ್ಲಿ" ನೀರಾವರಿ ಸಾಮರ್ಥ್ಯವನ್ನು ಸೃಜಿಸುವ ವಿಚಾರಕ್ಕೆ ನನ್ನ ಸರ್ಕಾರವು ಹೆಚ್ಚಿನ ಒತ್ತು ನೀಡುತ್ತದೆ. ಕೃಷ್ಣಾ ಜಲಾಯನ ಪ್ರದೇಶದಲ್ಲಿನ ಎಲ್ಲಾ ಯೋಜನೆಗಳೂ ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳುವಂಥೆ ಮಾಡಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುತ್ತದೆಎಂದು ಹೇಳಿದ್ದಾರೆ. ಹೀಗೆ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ನಿರ್ದಿಷ್ಟವಾಗಿ ನಿಗದಿತ ವೇಳೆಯೊಳಗೆ ಮಾಡುತ್ತೇವೆಂದು ಹೇಳಿರುವಾಗ ಇದು ಆಶ್ವಾಸನೆಯೇ ಇಲ್ಲದಿರತಕ್ಕ ಭಾಷಣ ಎಂದು ಮಾನ್ಯ ವಿರೋಧಪಕ್ಷದವರು ಹೇಳುವುದನ್ನು ಯಾರೂ ಒಪ್ಪುವುದಿಲ್ಲ. ನಮ್ಮ ಸರ್ಕಾರ ಕೂಡ ಕೆಲವು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈಗತಾನೇ ಮಹಾ ಚುನಾವಣೆಗಳು ಮುಗಿದಿವೆ. ಇದರಲ್ಲಿ ಜನರು ಕಳೆದ ಸರ್ಕಾರಗಳ ಸಾಧನೆಗಳನ್ನು ತಿರಸ್ಕರಿಸಿ, ಜಿಗುಪ್ಸೆಯಿಂದ ಹೊಸ ಸರ್ಕಾರವಾದರೂ ಉತ್ತಮ ಕೆಲಸಗಳನ್ನು ಮಾಡಲಿ ಎಂದು ಮುಗಿಲೆತ್ತರದ ಆಸೆಯನ್ನು ಇಟ್ಟುಕೊಂಡು ಬಂದಾದ ಫಲಿತಾಂಶಗಳನ್ನು ನಮ್ಮನ್ನು ತಂದು ಕೂಡಿಸಿದ್ದಾರೆ. ನಮ್ಮ ಈ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದು ಕೂಡಿಸಿದ್ದಾರೆ. ಮುಗಿಲೆತ್ತರದ ಆಸೆಗಳನ್ನಿಟ್ಟುಕೊಂಡಿರುವ ಜನರ ಆಕಾಂಕ್ಷೆಗಳನ್ನು ಈಡೇರಿಸುವುದು ಕಷ್ಟಸಾಧ್ಯವಾದುದು. ಮಾನ್ಯ ರಾಜ್ಯಪಾಲರು ಹೇಳಿರತಕ್ಕ ಎಲ್ಲಾ ವಿಷಯಂಗಳಲ್ಲೂ ಕೂಡ ನಮ್ಮ ಇತಿಮಿತಿಯಲ್ಲಿ ಎಲ್ಲರ ಆಕಾಂಕ್ಷೆಗಳನ್ನೂ ಈಡೇರಿಸುವುದಕ್ಕೆ ನಾವು ದೃಢ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಮಾತನ್ನು ಎಲ್ಲರೂ ಒಮ್ಮನಸ್ಸಿನಿಂದ ಸ್ವಾಗತಿಸಬೇಕು. ಮಾನ್ಯ ರಾಜ್ಯಪಾಲರು ಈ ಮಾತುಗಳನ್ನು ಹೇಳಿರುವುದಕ್ಕೆ ಅವರಿಗೆ ವಂದನೆಗಳನ್ನರ್ಪಿಸಬೇಕಾಗಿದೆ. ಕೆಲವು ವಿಷಯಗಳು ಇದರಲ್ಲಿ ಇಲ್ಲದೇ ಇರಬಹುದು ಅಂಥವುಗಳನ್ನು ನಾವು ಇದರಲ್ಲಿ ಸೇರಿಸಿಕೊಳ್ಳಬಹುದು. ಹೊಸ ಕಾರ್ಯಕ್ರಮಗಳು ಇಲ್ಲದಿರಬಹುದು. ಆದರೆ ೨೦ ಅಂಶಗಳ ಕಾರ್ಯಕ್ರಮಗಳು ಏನಿವೆ ಅವು ಹಳೆಯವು ಇರಬಹುದು, ಹೊಸವು ಇರಬಹುದೂ ಯಾವುದೇ ಆದರೂ ಜನಪರ ನೀತಿಯಿಂದ ಕೂಟ್ಟಂಥ, ಬಡ ಜನತೆಗೆ, ಗರೀಬರಿಗೆ ಉಪಯುಕ್ತವಾದಂಥ ಕಾರ್ಯಕ್ರಮಗಳು ಏನಿವೆ ಅವು ನಮ್ಮ ಸಮಾಜಕ್ಕೆ ಒಳ್ಳೆಯ ಕಲಸ ಕಾರ್ಯಗಳಲ್ಲವೆ ? ಹಳೆಯ ಕಾರ್ಯಕ್ರಮಗಳೇ ಬಹಳ ಉತ್ತಮವಾಗಿರುವಾಗ ಇನ್ನು ಹೊಸ ಕಾರ್ಯಕ್ರಮಗಳನ್ನು ನಾವು ಏತಕ್ಕೆ ಹಾಕಿಕೊಳ್ಳಬೇಕು ? ಸೂರನ್ನೇ ಕಾಣದ ಜನರಿಗೆ, ಅನ್ನವನ್ನೇ ಕಾಣದ ಜನರಿಗೆ, ಮತ್ತು ವಿದ್ಯೆಯನ್ನೇ ಕಾಣದ ಜನರಿಗೆ ಸೂರು, ಮನೆ, ವಿದ್ಯೆ, ಅನ್ನವನ್ನು ಕೊಟ್ಟಂಥ ಶ್ರೀಮತಿ ಇಂದಿರಾಗಾಂಧಿಯವರನ್ನು ನಾವೆಲ್ಲರೂ

ಸ್ಮರಿಸಬೇಕು. ಬ್ಯಾಂಕ್ ರಾಷ್ಟ್ರೀಕರಣವಾದಮೇಲೆ ಜನಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿರುವಾಗ ಇದರಲ್ಲಿ ಯಾವುದೇ ಜನಪರ ಕಾರ್ಯಕ್ರಮಗಳಿಲ್ಲವೆಂದು ಹೇಳುವುದಾದರೂ ಹೇಗೆ ? ಈಗ ರಾಜ್ಯಪಾಲರ ಆಡಳಿತಕಾಲದಲ್ಲಿ ದರೋಡೆಗಳು ನಡೆದಿಲ್ಲವೆಂದು ಹೇಳುವುದಿಲ್ಲ. ಹಿಂದೆ ಜನತಾ ಸರ್ಕಾರ ಆಡಳಿತದಲ್ಲಿ ಇದ್ದಾಗಲೂ ಕೂಡ ಅನೇಕ ದೊಡ್ಡ ದೊಡ್ಡ ದರೋಡೆಗಳು ನಡೆದವು. ಅದು ತಮಗೆಲ್ಲರಿಗೂ ಗೊತ್ತಿರುತ್ತದೆ. ರಾಜ್ಯಪಾಲರ ಕಾಲದಲ್ಲೇ ನಡೆಯುತೆಂದು ಹೇಳುವುದು ಸರಿಯುಲ್ಲ. ತಮ್ಮ ಸರ್ಕಾರದ ಆಡಳಿತದಲ್ಲಿದ್ದಂಥ ಸಮಯದಲ್ಲಿ ಏರ್‌ಬಸ್ ಮಂತ್ರಿ ಮಂಡಲವನ್ನು ರಚನೆಮಾಡಿಕೊಂಡು ಸರ್ಕಾರದ ಗತಿ ಏನಾಯಿತೆಂಬುದು ಕೂಡ ಎಲ್ಲರಿಗೂ ಗೊತ್ತು ಸಂಕ್ಷಿಪ್ತವಾಗಿ ಮಂತ್ರಿ ಮಂಡಲವನ್ನು ಮಾಡಿಕೊಂಡು ಆಡಳಿತ ಮಾಡತಕ್ಕಂಥ ಮಂತ್ರಿಮಂಡಲ ಏರ್‌ಬಸ್ ಮಂತ್ರಿಮಂಡಲಕ್ಕಿಂತಲೂ ಪರಿಣಾಮಕಾರಿಯಾಗಿ ಕೆಲಸ ಮಾಡುವಂಥದ್ದನ್ನು ನೋಡಬಹುದು. ಮಾನ್ಯ ಕೆಲವು ಶಾಸಕ ಸದ್ಯಸರು ಹಲವಾರು ವಿಚಾರಗಳನ್ನು ಹೇಳಿದರು. ನೀರಾವರಿ ಬಾವಿಗಳ ವಿಚಾರ. ಇದರಲ್ಲಿ ಏತ ನೀರಾವರಿ ಬರುತ್ತದೆ. ಏತನೀರಾವರಿ ಹಿಂದಿನಿಂದಲೂ ಎಲ್ಲರಿಗೂ ತಿಳಿದಿದೆ. ಇದರಿಂದ ಒಂದು ಸಾವಿರದಿಂದ ನಾಲ್ಕು ಸಾವಿರ ಎಕರೆಗಳಿವರೆಗೆ ನೀರಾವರಿಯಾಗುತ್ತದೆ.

ಒಬ್ಬ ಸದಸ್ಯರು.— ನಮ್ಮ ಸರ್ಕಾರವನ್ನು ಏರ್‌ಬಸ್ ಮಂತ್ರಿಮಂಡಲವೆಂದು ಹೇಳಿದಿರಿ. ಅಂದರೆ ಮುಂದೆ ನಿಮ್ಮ ಮಂತ್ರಿಮಂಡಲದ ವಿಸ್ತರಣೆ ಇಲ್ಲವೇ ? ಇಷ್ಟೇ ಆದರೆ ಬಹಳ ಸಂತೋಷ.

ಶ್ರೀ ಹಲಗೇಗೌಡ.— ಜನತಾ ಸರ್ಕಾರದವರು ಮಾಡಿರುವಷ್ಟು ನಾವು ಮಾಡುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ.— ಏರ್‌ಬಸ್ ಸರ್ಕಾರವನ್ನು ನೋಡಿದ್ದೇವೆ, ಜಂಬೋಜೆಟ್ ಸರ್ಕಾರವನ್ನು ನೋಡುತ್ತೇವೆ.

ಶ್ರೀ ಹಲಗೇಗೌಡ.— ಅದು ಆದಮೇಲೆ ನೋಡೋಣ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಒಂದುಸಾವಿರ ಎಕರೆ ನೀರಾವರಿಯಾಗುತ್ತದೆಂದು ಭಾವಿಸಿದ್ದು ೫೦ ಎಕರೆಗಳಿಗೂ ನೀರಾವರಿಗೆ ಅನುಕೂಲವಾಗದ ಅನೇಕ ಪ್ರಕರಣಗಳು ಇದೆ. ಎಲ್ಲಿ ಏತ ನೀರಾವರಿ ಯೋಜನೆಗಳು ಈರೀತಿಯಾಗಿ ಪರಿಣಾಮಕಾರಿಯಾಗಿಲ್ಲವೊ ಅಲ್ಲೆಲ್ಲಾ ನೀರಾವರಿ ಯೋಜನೆಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಹೇಳುವುದಾದರೆ ಸರಿಯಾದ ಫೋಟರ್‌ಗಳು ಹೆಚ್ಚಿನ ಅಶ್ವಶಕ್ತಿಯನ್ನು ಹೊಂದಿರತಕ್ಕಂಥವುಗಳು ದೊರೆಯುತ್ತಿಲ್ಲ. ಈವೊತ್ತು ವಿದ್ಯುಚ್ಛಕ್ತಿ ಕೇವಲ ದಿವಸದಲ್ಲಿ ಒಂದು ಗಂಟೆ ಮೂರು ಗಂಟೆ ಇರುವುದೇ ಬಹಳ ಹೆಚ್ಚು. ಸಾಯಂಕಾಲದ ವೇಳೆಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಿದರೆ ವ್ಯವಸಾಯಗಾರರಿಗೆ ಅನುಕೂಲವಾಗುತ್ತದೆಯೇ ಎನ್ನುವುದನ್ನು ಮನಗಾಣಬೇಕು. ಕೈಗಾರಿಕೋದ್ಯಮಗಳಿಗೆ ರಾತ್ರಿವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡಿದರೆ ಅವರು ಹೇಗೋ ಉಪಯೋಗಮಾಡಿಕೊಳ್ಳುತ್ತಾರೆ. ಆದ್ದರಿಂದ ವ್ಯವಸಾಯಗಾರರಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈಗಿನ ವಿದ್ಯಾಭಾಸ ಬರಬರುತ್ತಾ ಒಂದುರೀತಿ ಸಂಪಾದನೆಯನೆಯ ಮಾರ್ಗವಾಗಿ ಪರಿಣಮಿಸಿರುವುದೂ ಕಂಡುಬರುತ್ತಿದೆ. ವಿದ್ಯಾಸಂಸ್ಥೆಗಳಿಂದ ಕ್ಯಾಪಿಟೇಷನ್ ಹಣ ಬಹಳವಾಗಿ ಇವೆ. ಇದರ ಬಗ್ಗೆ ಹೆಚ್ಚಿನ ನಿಗವಹಿಸಬೇಕೆಂದು ನಾನಾದರೂ ಹೇಳುತ್ತೇನೆ. ಮೆರಿಟ್ ಇರತಕ್ಕಂಥ ವಿದ್ಯಾರ್ಥಿಗಳಿಗೆ ಇದು ಅನುಕೂಲವಾಗುವುದಿಲ್ಲ. ಕೇವಲ ಶ್ರೀಮಂತ ವರ್ಗದವರಿಗೆ ಮಾತ್ರ ಈಗಿನ ವಿದ್ಯಾಭ್ಯಾಸ ಅನುಕೂಲವಾಗುತ್ತದೆ. ಬಡವರಿಗೆ ಜನಸಾಮಾನ್ಯರಿಗೆ ಮೆರಿಟ್ ಇರತಕ್ಕಂಥ ವಿದ್ಯಾರ್ಥಿಗಳಿಗೆ ವಂಚನೆ ಮಾಡಿದಂತಾಗುತ್ತದೆ. ವಿದ್ಯಾಭ್ಯಾಸವನ್ನು ರಾಷ್ಟ್ರೀಕರಣಮಾಡಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ಸರ್ವರಿಗೂ ಸಮಪಾಲು, ಸಮಬಾಳ್ವೆ ಎಂದು ಹೇಳುವಾಗ ಬಿಷಪ್ ಕಾಟನ್ ಸ್ಕೂಲ್‌ನಲ್ಲಿ ಓದತಕ್ಕಂಥ ಮಕ್ಕಳು ದೊಡ್ಡ ದೊಡ್ಡ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳ ಜೊತೆಯಲ್ಲಿ ಹೆಳ್ಳಿಗಾಡಿನಲ್ಲಿ ಓದತಕ್ಕಂಥ ಮಕ್ಕಳು ಸ್ಪರ್ಧೆ ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ. ಇವರಿಗೆ ನಿಂತುಕೊಳ್ಳುವುದಕ್ಕೆ ಶಕ್ತಿ ಇಲ್ಲದಿರುವಾಗ ಪೈಲ್ವಾನ್ ಜೊತೆಯಲ್ಲಿ ಓಡು ಎಂದರೆ ಹೇಗೆ ಸಾಧ್ಯವಾಗುತ್ತದೆ.

ಆದ್ದರಿಂದ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೆ ವಿಶೇಷ ಸವಲತ್ತುಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಅವರು ನೌಕರಿಗೆ ಹೋಗುವಾಗ ಅಥವಾ ಉನ್ನತ ವಿದ್ಯಾಭ್ಯಾಸಕ್ಕೆ ಹೋಗುವಾಗ ಅವರಿಗೆ ವಿಶೇಷ ಅಂಕಗಳನ್ನು ಕೊಟ್ಟು ಸ್ಥಳಗಳನ್ನು ಕಾಯ್ದಿರಿಸಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಕಳಕಳಿಯಿಂದ ತಮ್ಮ ಮೂಲಕ ಸರ್ಕಾರಕ್ಕೆ ಭಿನ್ನವಿಸಿಕೊಳ್ಳುತ್ತೇನೆ. ವಿರೋಧ ಪಕ್ಷದವರು ಅವರ ಕಾಲದಲ್ಲಿ ಔಷಧಿ ಅಂಗಡಿಗಳಿಗಿಂತ ಜಾಸ್ತಿ ವೈನ್‌ಷಾಪ್‌ಗಳನ್ನು ಕೊಟ್ಟಿದ್ದಾರೆ. ಯಾರೂ ಇದರ ಬಗ್ಗೆ ಒಂದು ಮಾತೂ ಹೇಳಲಿಲ್ಲ.

ಗಾಂಧಿ ಹಿಂಬಾಲಕರಾದ ನೀವು ಗಾಂಧಿ ನಡೆದಂತಹ ದಾರಿಯಲ್ಲಿ ಸ್ವಲ್ಪವಾದರೂ ಹೋಗುವುದು ಬೇಡವೆ ? ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವುದು ಕಷ್ಟ.

ಶ್ರೀ ಬಸವರಾಜ ರಾಯರೆಡ್ಡಿ.—ಅವರು ಹೇಳಿದ್ದುದು ಸರಿ ಅನ್ನಿಸುತ್ತದೆ. ನಾವು ವೈನ್ ಷಾಪ್‌ಗಳನ್ನು ತೆರೆಯಲು ಅವಕಾಶ ಕೊಟ್ಟರೆ ನೀವು ಬೇರು. ಬ್ರಾಂಡಿ ಷಾಪುಗಳನ್ನು ತೆರೆಯಲು ಅವಕಾಶ ಕೊಟ್ಟಿರಿ. ವೈನ್‌ನಲ್ಲಿ ಆಲ್ಕೋಹಾಲ್ ಇಲ್ಲ. ಹೆಂಡದ ಅಂಗಡಿಗಳು ತಮ್ಮ ಕಾಲದಲ್ಲಿ ಆಗಿರುವ ಹಾಗೆ ಬೇರೆ ಯಾವ ಕಾಲದಲ್ಲಿಯೂ ಆಗಿಲ್ಲ.

ಛೇರ್ಮನ್.—ಆರು ಗಂಟೆಗೆ ಬೇರೆ ಸಭೆ ಇದೆ. ಆದ್ದರಿಂದ ಜಾಗ್ರತೆ ಮುಗಿಸಿ.

ಶ್ರೀ ಹಲಗೇಗೌಡ.—ಆದ್ದರಿಂದ ಹಂತಹಂತವಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕು. ಇದನ್ನು ಸರ್ಕಾರ ಇಂಟ್ರಡ್ಯೂಸ್ ಮಾಡಬೇಕೆಂದು ಹೇಳಬಯಸುತ್ತೇನೆ. ಇದರಿಂದ ತಕ್ಷಣದಲ್ಲಿ ರೆವಿನ್ಯೂ ಬರುವುದು ಹೋಗುತ್ತದೆ. ಆದರೆ ಪಾನಮತ್ತರಾದ ಜನರಿಂದ ಸಮಾಜಕ್ಕೆ ಮತ್ತು ಅವರ ಸಂಸಾರಕ್ಕೆ ಆಗತಕ್ಕ ಕೆಡಕು ಅಷ್ಟಿಷ್ಟಲ್ಲ. ಇದರಿಂದ ಬರತಕ್ಕ ಆದಾಯಕ್ಕಿಂತ ಹೆಚ್ಚು ಖರ್ಚು ಬರುತ್ತದೆ. ಪಾನಮತ್ತರಾಗುವ ಜನರು ಕಾಯಿಲೆ ಬಿದ್ದರೆ ಟ್ಯಾಕ್ಸ್ ಹಣಕ್ಕಿಂತ ಅವನ ಆರೋಗ್ಯಕ್ಕೆ, ಸಾಮಾಜಿಕ ಉದ್ಧಾರಕ್ಕೆ ಖರ್ಚು ಮಾಡತಕ್ಕ ಹಣವೇ ಜಾಸ್ತಿಯಾಗುತ್ತದೆ. ಆದ್ದರಿಂದ ಬರುವ ಹಣ ಬಾರದಿದ್ದರೂ ಚಿಂತೆ ಇಲ್ಲ. ಇವತ್ತಿನ ದಿವಸ ಏನಾಗಿದೆ ಎಂದರೆ ಮರ್ಯಾದಸ್ಥ ಹೆಣ್ಣುಮಕ್ಕಳು ರಸ್ತೆಯಲ್ಲಿ ಆರು ಗಂಟೆಯ ಮೇಲೆ ತಿರುಗಾಡುವುದೇ ಕಷ್ಟವಾಗಿದೆ, ನಾಚಿಕೊಂಡು ನಡೆದಾಡಬೇಕಾಗಿದೆ. ಇಂಥ ಪರಿಸ್ಥಿತಿಯನ್ನು ಸೃಷ್ಟಿಸಿದೆ ಜನತಾ ದಳದ ಸರ್ಕಾರ. ಇದನ್ನು ಒಂದೇ ಸಾರಿ ತೆಗೆಯಿರಿ ಎಂದು ಹೇಳುವುದಿಲ್ಲ, ಹಂತಹಂತವಾಗಿ ಕಡಿಮೆ ಮಾಡಿಕೊಂಡು ಬರಬಹುದೆಂದು ಸಲಹೆ ಮಾಡುತ್ತೇನೆ. ಇನ್ನು ಸರ್ಕಾರ ಕ್ಷೇತ್ರುದಲ್ಲಿ ಒಂದನ್ನು ನಿಲ್ಲಿಸಬೇಕಾಗುತ್ತದೆ. ಮಾನ್ಯ ಜಾಲಪ್ಪನವರ ದಿಟ್ಟ ನಿಲುವನ್ನು ಸ್ವಾಗತಿಸುತ್ತೇನೆ. ವ್ಯವಸಾಯಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ತೆಗೆದುಕೊಂಡ ದಿಟ್ಟ ನಿಲುವನ್ನು ಮುಂದೆಯೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಧ್ಯವರ್ತಿಗಳ ಕಾಟವನ್ನು ತಪ್ಪಿಸಿದರೆ ಬೆಳೆಯಂತಕ್ಕ ರೈತನಿಗೆ ಅನುಕೂಲವಾಗುತ್ತದೆ. ವ್ಯವಸಾಯಗಾರರ ಹಿತರಕ್ಷಣೆಯನ್ನು ಕಾಪಾಡಬೇಕು. ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಕೊಡುವ ಬೆಲೆಯನ್ನು ಯಾವ ಖಾಸಗಿಯವರೂ ಕೊಡುವುದಿಲ್ಲ. ಸಹಕಾರಿ ರಂಗದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ರೈತರಿಗೆ ಸಾರ್ವಜನಿಕರಿಗೆ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ರೈತ ಸಂಘದವರು ಏನೂ ಮಾಡಿಲ್ಲವೆಂದು ಹೇಳುತ್ತಾರೆ. ಅವರು ತಿಳಿದುಕೊಳ್ಳಬೇಕು, ನಾನು ರೈತನ ಮಗ, ನಾನೂ ಒಬ್ಬ ಸಣ್ಣ ರೈತ. ನಾನೇನೂ ನೂರಾರು ಎಕರೆ ಜಮೀನನ್ನು ಇಟ್ಟುಕೊಂಡಿರುವನಲ್ಲ. ಇರತಕ್ಕ ಜಮೀನಿನಲ್ಲಿ ನಾನು ಸ್ವತಃ ದುಡಿದು ಜೀವನ ಮಾಡುವವನು. ವ್ಯವಸಾಯದ ಕೆಲಸವನ್ನು ನಾನು ಸಹ ಮಾಡುತ್ತೇನೆ. ಯಾರಾದರೂ ಅನುಮಾನಪಟ್ಟರೆ ನನ್ನ ಜೊತೆಯಲ್ಲಿ ಬಂದು ಕೆಲಸ ಮಾಡಬಹುದು. ನಾವೇ ರೈತರು, ಇನ್ನು ಯಾರೂ ರೈತರಲ್ಲ. ನನಗೆ ರೈತರ ಬಗ್ಗೆ ಕಾಳಜಿ ಇರುವುದು ಎನ್ನುವಂತೆ ಜನತಾ ದಳದವರು ಮತ್ತು ರೈತಸಂಘದವರು ಹೇಳುತ್ತಾರೆ. ಅವರಲ್ಲಿ ಎಷ್ಟು ಜನರಿಗೆ ನೇಗಿಲು ಉಳುವುದಕ್ಕೆ ಬರುತ್ತದೆ ? ಎಷ್ಟು ಜನರಿಗೆ ಬಿತ್ತನೆ ಮಾಡುವುದಕ್ಕೆ ಬರುತ್ತದೆ ಎಂದು ಕೇಳುತ್ತೇನೆ ಅವರೇ ವ್ಯವಸಾಯಗಾರರು. ಉಳಿದವರು ವ್ಯವಸಾಯಗಾರರಲ್ಲ ಎನ್ನುವ ಮಟ್ಟದಲ್ಲಿ ಅವರು ಮಾತನಾಡುತ್ತಾರೆ. ನಾವೂ ಕೂಡ ರೈತರ ಮಕ್ಕಳೆ. ರೈತರಾಗಿ ಬದುಕಿ ಬಾಳಿಬಂದಿದ್ದೇವೆ. ನಾವು ಒಂದು ವಿಚಾರ ಯೋಚನೆ ಮಾಡಬೇಕಾಗಿದೆ. ಬೇರೆ ದೇಶಗಳಲ್ಲಿ ೧೦–೧೨ ಪರ್ಸೆಂಟ್ ರೈತರಿದ್ದರೂ ಅವರು ಉಪಯೋಗಿಸಿ ಬೇರೆ ದೇಶಕ್ಕೆ ರಫ್ತು ಮಾಡುವಷ್ಟು ಬೆಳೆ ಬೆಳೆಯುತ್ತಾರೆ. ನಮ್ಮ ದೇಶದಲ್ಲಿ ೭೦ ಪರ್ಸೆಂಟ್ ರೈತರಿದ್ದರೂ ನಮಗೆ ಬೇಕಾಗುವಷ್ಟು ಬೆಳೆಯನ್ನು ಬೆಳೆಯುತ್ತಾರೆ. ಇದಕ್ಕೆ ಕಾರಣ ಏನು ? ರೈತರಿಗೆ ಸೌಲಭ್ಯಗಳನ್ನು ಕೊಡುವುದು ಸರ್ಕಾರದ ಕರ್ತವ್ಯ. ಆದರೆ ಕೊಟ್ಟ ಸಾಲವನ್ನು ಹಿಂದಿರುಗಿಸುವುದಿಲ್ಲ ಎಂದರೆ ಅದು ಯಾವ ನ್ಯಾಯ ಈ ವರ್ಷ ಸಾಲ ಮನ್ನಾ ಮಾಡಂತಾರೆ ಅಂತ ಇಟ್ಕೊಳ್ಳಿ. ಮುಂದಿನ ವರ್ಷ ಏನು ಮಾಡುತ್ತೀರಿ ? ಮುಂದಿನ ವರ್ಷ ಸಾಲ ಬೇಕೋ ಬೇಡವೋ ? ಆದ್ದರಿಂದ ಸಾಲವನ್ನು ವಾಪಸ್ ಕೇಳಬಾರದು ಎಂಬ ವಾದ ಸರಿಯಲ್ಲ. ರೈತ ಸಂಘದ ಸದಸ್ಯರಿಗೆ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೇವಲ ಪೋಷಣೆಗಳಿಂದ, ಆಫೀಸುಗಳಿಗೆ ಹೋಗಿ ಛೇರಾವೊ ಮಾಡುವುದರಿಂದ ಸಮಸ್ಯೆಗಳು ಪರಿಹಾರ ಆಗುವುದಿಲ್ಲ. ಆ ರೀತಿ ಮಾಡುವುದು ಬೇಡ, ಈಗಿರತಕ್ಕ ಸಿಸ್ಟಂ ತೆಗೆದು ಬೇರೆ ಸಿಸ್ಟಂ ಜಾರಿಗೆ ತರುವುದಕ್ಕಾಗುವುದಿಲ್ಲ. ಸಹಕಾರ ಸಂಘದ ಸಾಲ, ಅಪೆಕ್ಸ್ ಬ್ಯಾಂಕ್ ಸಾಲ ಮತ್ತು ಡಿ.ಸಿ.ಸಿ. ಬ್ಯಾಂಕುಗಳ ಸಾಲವನ್ನು ವಾಪಸ್ ಕೊಡದಿದ್ದರೆ ಅದು ಬದುಕುವುದು ಹೇಗೆ ? ರೈತರಿಗೆ ಸಹಾಯ ಮಾಡುವುದಕ್ಕೆ ಬೇರೆ ಸಂಸ್ಥೆಗಳು ಯಾವುದಿದೆ ? ಆದ್ದರಿಂದ ನನ್ನ ಕಳಕಳಿಯ ಮನವಿ ಎಂದರೆ

ರೈತರಿಗೋಸ್ಕರ ಇರುವ ಸಂಸ್ಥೆಗಳನ್ನು ಬೆಳೆಸಬೇಕು. ಇನ್ನೂ ನಾನು ಹೇಳುವುದಿತ್ತು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಇಷ್ಟಕ್ಕೆ ನನ್ನ ಭಾಷಣವನ್ನು ಮುಕ್ತಾಯಗೊಳಿಸಬೇಕಾಗಿದೆ. ನಮ್ಮ ನಾಯಕರು ನಾನು ಹೇಳಿದ ವಿಚಾರಗಳನ್ನು ಗಮನಿಸುತ್ತಾರೆಂದು ಭಾವಿಸಿದ್ದೇನೆ. ಎಲ್ಲಾ ಕಾರ್ಯಕ್ರಮಗಳನ್ನು ಒಳಗೊಂಡು ಸಂಕ್ಷಿಪ್ತ ರೀತಿಯಲ್ಲಿರತಕ್ಕ ರಾಜ್ಯಪಾಲರ ಭಾಷಣವನ್ನು ಸರ್ವ ರೀತಿಯಿಂದಲೂ ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್.—ಸದನವು ಈಗ ಮುಕ್ತಾಯವಾಗಿ ನಾಳೆ ಬೆಳಿಗ್ಗೆ ೯ ಗಂಟೆಗೆ ಮತ್ತೆ ಸೇರುವುದು.

(ಸದನವು ೫ ಗಂಟೆ ೫೮ ನಿಮಿಷಕ್ಕೆ ಮುಕ್ತಾಯವಾಗಿ ಮರುದಿನ ತಾ. ೨೧.೧೨.೮೯ರಂದು ಬೆಳಿಗ್ಗೆ ೯ ಘಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)